SEPTEMBER 19, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**‘ಸೇವಾ ಸಂಕಲ್ಪ ಮಾಸಿಕ ಅಭಿಯಾನ’ ದೇಶಾದ್ಯಂತ ಜರುಗುತ್ತಿದೆ.** ಸ್ಟಾರ್ಟ್‌ಅಪ್ ಇಂಡಿಯಾ ಪ್ರಕಲ್ಪದಡಿ, ವಿದ್ಯಾರ್ಥಿಗಳು ಹಾಗೂ ಮಕ್ಕಳಲ್ಲಿ, ಉದ್ಯಮಶೀಲತೆ ಪ್ರೋತ್ಸಾಹಿಸಲು, 10 ಸಾವಿರ ಅಟಲ್ ಟಿಂಕರಿಂಗ್ ಲ್ಯಾಬ್ ಗಳನ್ನು ಶಾಲೆಗಳಲ್ಲಿ ಸ್ಥಾಪಿಸಲಾಗಿದೆ. ಪ್ರಸಕ್ತ, 2026 ಮಾರ್ಚ್ ತಿಂಗಳಾಂತ್ಯಕ್ಕೆ, ದೇಶಾದ್ಯಂತ, 1 ಕೋಟಿ 1 ಲಕ್ಷ ವಿದ್ಯಾರ್ಥಿಗಳು, ಪ್ರಯೋಗ, ಪರೀಕ್ಷೆ, ಶೋಧನೆ ಮೂಲಕ, ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು, ಅಟಲ್ ಟಿಂಕರಿಂಗ್ ಲ್ಯಾಬ್‌ಗಳಲ್ಲಿ, ನಿರತರಾಗಿದ್ದಾರೆ.

<><><>

**ಮೈಸೂರಿನ ಅನಿತಾ ಸದಾನಂದ ಅವರು,** Mamma Mills Foods Private Limited ಎಂಬ ಸ್ಟಾರ್ಟ್‌ಅಪ್ ಕಂಪೆನಿಯ ಪ್ರವರ್ತಕಿ. ಮೂಲತಃ ರೈತ ಕುಟುಂಬದವರು. ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ, ಕೃಷಿಕ್ ಸ್ಟಾರ್ಟ್ ಅಪ್ ನವೋದ್ಯಮ ಇನ್‌ಕ್ಯುಬೇಷನ್ ಕೇಂದ್ರದ ಸಹಾಯದಿಂದ, ಪೌಷ್ಟಿಕಾಂಶಯುಕ್ತ, ನೇರವಾಗಿ ಅಡುಗೆಗೆ ಬಳಸಬಹುದಾದ ಉತ್ಪನ್ನಗಳನ್ನು, ಆರ್ಗ್ಯಾನಿಕ್ ಮಂಡ್ಯ ಮೂಲಕ, ಅವರು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಅನಿತಾ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

**ಅನಿತಾ ಸದಾನಂದ ಧ್ವನಿ 45 ಸೆಕೆಂದುಗಳು**

<><><>

**ಇಂದು, ಅಂತಾರಾಷ್ಟ್ರೀಯ** ಹಾವು ಕಡಿತದ ಜನ ಜಾಗೃತಿ ದಿನಾಚರಣೆ. “ಹಾವು ಕಡಿತದ ವಿಷದಿಂದ ಉಂಟಾಗುವ ಅಂಗವೈಕಲ್ಯ; ಒಂದು ಗುಪ್ತ ಬಿಕ್ಕಟ್ಟು” ಎಂಬ ಧ್ಯೇಯದೊಂದಿಗೆ, ಆಚರಿಸಲಾಗುತ್ತಿದೆ. ವಿಷದ ಹಾವು ಕಡಿತವನ್ನು, ವಿಶ್ವ ಆರೋಗ್ಯ ಸಂಸ್ಥೆ ಅಧಿಕೃತವಾಗಿ, ‘ಎ’ ವರ್ಗದ, ಉಷ್ಣವಲಯದ ನಿರ್ಲಕ್ಷಿತ ಕಾಯಿಲೆಯಾಗಿ, ಆದ್ಯತೆ ಪಟ್ಟಿಗೆ ಸೇರಿಸಿದೆ. ಪ್ರತಿ ವರ್ಷ, ವಿಷದ ಹಾವುಗಳ ಕಚ್ಚುವಿಕೆಯಿಂದ, ಜಗತ್ತಿನಾದ್ಯಂತ, 4 ಲಕ್ಷ ಜನ, ಶಾಶ್ವತವಾಗಿ ಅಂಗವೈಕಲ್ಯ ಅಥವಾ ವಿರೂಪಗೊಳ್ಳುತ್ತಿದ್ದಾರೆ. ಹಾವುಗಳು, ಪಾರ್ಶ್ವವಾಯು,

ಮಾರಕ ರಕ್ತಸ್ರಾವ, ಮೂತ್ರಪಿಂಡ ವೈಫಲ್ಯ ಮತ್ತು ಅಂಗಾಂಶ ಹಾನಿಯನ್ನು ಉಂಟುಮಾಡಬಹುದು. ಸುರಕ್ಷಿತ ಅಂತರ ಹಾಗೂ ಮುಂಜಾಗ್ರತೆ ಅವಶ್ಯ.

<><><>

**"ತಂಪಾದ ಗ್ರಹಕ್ಕಾಗಿ, ಜಾಗತಿಕ ಕ್ರಮ"** ಎಂಬ ಧ್ಯೇಯದೊಂದಿಗೆ, ವಿಶ್ವ ಓಝೋನ್ ದಿನಾಚರಣೆಯನ್ನು, ಧಾರವಾಡದ ಅಂಜುಮನ್ ಪದವಿ ಮಹಾವಿದ್ಯಾಲಯದ, ಭೂಗೋಳಶಾಸ್ತ್ರ ವಿಭಾಗದಲ್ಲಿ, ಆಚರಿಸಲಾಯಿತು. ಪ್ರಾಚಾರ್ಯ ಡಾಕ್ಟರ್ ಎನ್.ಬಿ. ನಾಲತವಾಡ ಮಾತನಾಡಿ, ಭವಿಷ್ಯದ ಪೀಳಿಗೆಗಾಗಿ ಸುಸ್ಥಿರ ಪರಿಸರ ನಿರ್ಮಾಣ, ನಮ್ಮ ಪ್ರತಿ ಹೆಜ್ಜೆಯಲ್ಲಿ ಧ್ವನಿಸುವಂತಾಗಬೇಕು ಎಂದರು.

<><><>

**ಸೂಕ್ಷ್ಮಾಣು ಜೀವಿಗಳು, ಕೇವಲ ರೋಗಕಾರಕಗಳಲ್ಲ;** ರೋಗನಿರ್ಣಯ, ಚಿಕಿತ್ಸೆ, ಔಷಧೋತ್ಪಾದನೆ, ಕೃಷಿ, ಆಹಾರ, ಪರಿಸರ ಮತ್ತು ಕೈಗಾರಿಕೆಯಲ್ಲಿ ಅವು ನಿರ್ಣಾಯಕ ಪಾತ್ರ ವಹಿಸುತ್ತವೆ ಎಂದು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ, ಡಾಕ್ಟರ್ ಕೆ. ಸತ್ಯಮೂರ್ತಿ ಹೇಳಿದ್ದಾರೆ. ಜೆ.ಎಸ್.ಎಸ್. ಬನಶಂಕರಿ ಕಲಾ, ವಾಣಿಜ್ಯ ಮತ್ತು ಶಾಂತಿಕುಮಾರ ಗುಬ್ಬಿ ವಿಜ್ಞಾನ ಮಹಾವಿದ್ಯಾಲಯದಲ್ಲಿ, ಅಂತಾರಾಷ್ಟ್ರೀಯ ಸೂಕ್ಷ್ಮಜೀವಿ ದಿನಾಚರಣೆಯಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಸೂಕ್ಷ್ಮಜೀವಶಾಸ್ತ್ರ ವಿಜ್ಞಾನದಲ್ಲಿ, ಹೇರಳ ಅವಕಾಶಗಳಿವೆ, ಎಂದರು.

<><><>

**ಸಮುದ್ರ ಮಾರ್ಗದ ರಕ್ಷಣೆಗಾಗಿ,** ಕಳೆದ ಎರಡು ದಶಕಗಳ ಕಾಲ ಕರ್ತವ್ಯ ನಿರ್ವಹಿಸಿದ, ಸಾವಿತ್ರಿಬಾಯಿ ಫುಲೆ, ಭಾರತೀಯ ಕೋಸ್ಟ್ ಗಾರ್ಡ್ ನೌಕೆ, ಇಂದು ಕಾರವಾರದಲ್ಲಿ, ನಿವೃತ್ತಿಯಾಗಲಿದೆ. ವಾಣಿಜ್ಯ ಬಂದರಿನ, ಕೋಸ್ಟ್ ಗಾರ್ಡ್ ಧಕ್ಕೆಯಲ್ಲಿ, ನೌಕೆಯ ಮೇಲಿನ ಧ್ವಜಾವತರಣದ ಮೂಲಕ, ನೌಕೆಯ ಸೇವೆಗೆ ವಿದಾಯ ಘೋಷಿಸಲಾಗುತ್ತಿದೆ.

<><><>

**ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ,** ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಲುಪಿದ್ದು, ಮಲೆನಾಡಿನ ರೈತರೊಂದಿಗೆ, ಸಂವಾದ ನಡೆಸಲಿದ್ದಾರೆ. ಡಾಕ್ಟರ್ ಕಸ್ತೂರಿರಂಗನ್ ವರದಿ ಆಧರಿಸಿ, ಕೇಂದ್ರ ಸರ್ಕಾರ ಪಶ್ಚಿಮಘಟ್ಟ ಸಂರಕ್ಷಣೆ ಕುರಿತು, 7ನೇ ಅಧಿಸೂಚನೆ ಹೊರಡಿಸಿದ ಹಿನ್ನೆಲೆ, ಸಾಧಕ–ಬಾಧಕಗಳ ಕುರಿತು, ಚರ್ಚೆ ನಡೆಸಲಿದ್ದಾರೆ ಎಂದು, ವರದಿಗಳು ತಿಳಿಸಿವೆ. ಬಳಿಕ, ಚಿಕ್ಕಮಗಳೂರು ಜಿಲ್ಲೆ, ಬಾಳೆಹೊನ್ನೂರಿಗೆ ಭೇಟಿ ನೀಡಿ, ರಂಭಾಪುರಿ ಪೀಠದ ದರ್ಶನ ಪಡೆಯಲಿದ್ದಾರೆ.

<><><>

**21ನೇ ತಾರೀಖು ನಿಗದಿಯಾಗಿದ್ದ,** ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ, 6ನೇ ಘಟಿಕೋತ್ಸವ, ಅನಿವಾರ್ಯ ಕಾರಣಗಳಿಂದ ಮುಂದೂಡಲಾಗಿದೆ. ಮುಂದಿನ ದಿನಾಂಕವನ್ನು ಶೀಘ್ರ ಪ್ರಕಟಿಸಲಾಗುವುದು ಎಂದು, ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

<><><>

**ಖ್ಯಾತ ನಾಟಕಕಾರ, ದಿವಂಗತ ಬಿ.ವಿ.ಕಾರಂತ ಅವರ,** ಜನ್ಮದಿನದ ಅಂಗವಾಗಿ, ಧಾರವಾಡ ರಂಗಾಯಣ, ಸೃಷ್ಟಿ ಪದವಿಪೂರ್ವ ವಿಜ್ಞಾನ ಮಹಾವಿದ್ಯಾಲಯದಲ್ಲಿ, ಇಂದು ಸಂಜೆ 6 ಗಂಟೆಗೆ, ಕಲಾವಿದ ರಾಘವ ಕಮ್ಮಾರ ಅವರಿಂದ, ರಂಗ ಸಂಗೀತ ಪ್ರಾತ್ಯಕ್ಷಿಕೆ ಆಯೋಜಿಸಿದೆ.

<><><>

**ಕರ್ನಾಟಕದ ತೇಜ್ವಿಸಿನಿ ಜಿ. ರಾವ ಅವರು,** ಪುದುಚೆರಿಯಲ್ಲಿ ನಿನ್ನೆ ಮುಕ್ತಾಯಗೊಂಡ, ದಕ್ಷಿಣ ವಲಯ ಜ್ಯೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ, 16 ವರ್ಷದೊಳಗಿನ ಬಾಲಕಿಯರ, ಶಾಟ್‌ಪಟ್‌ನಲ್ಲಿ, ಕೂಟ ದಾಖಲೆಯೊಂದಿಗೆ ಸ್ವರ್ಣ ಪದಕ ಜಯಿಸಿದರು. ಇಂದಿರಾ ಗಾಂಧಿ ಕ್ರೀಡಾ ಸಂಕೀರ್ಣದಲ್ಲಿ ನಡೆದ ಸ್ಪರ್ಧೆಯಲ್ಲಿ, ತೇಜಸ್ವಿನಿ 13 ದಶಾಂಶ 3–8 ಮೀಟರ್ ದೂರಕ್ಕೆ ಗುಂಡು ಎಸೆದರು. ಮೋದಿನಿ ಜನಾರ್ಧನ, ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**